ಓ.ಎಸ್.ನಂ.21/2022

ಪಿ.ಡಬ್ಲ್ಯೂ -01

**ಸಾಕ್ಷಿಯನ್ನು ದಿಃ 30.01.2026 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀ Y.R.H ವಕೀಲರಿಂದ.**

ಪ್ರತಿವಾದಿ 3 ನನಗೆ ನಿ.ಪಿ 1 ದಾಖಲೆ ಬರೆದುಕೊಟ್ಟಾಗಿನಿಂದ ಪರಿಚಯ ಆಗಿರುತ್ತಾರೆ. ಉಳಿದ ಪ್ರತಿವಾದಿಗಳು ಸಹ ನನಗೆ ಅದೇ ದಿನದಿಂದ ಪರಿಚಯವಾಗಿರುತ್ತಾರೆ. ನನ್ನ ಪ್ರಕಾರ ಪ್ರತಿವಾದಿಗಳಿಗೂ ನನಗೂ ನಿ.ಪಿ 1 ದಾಖಲೆಗೂ ಮೊದಲು ಯಾವುದೇ ಪರಿಚಯ ಮತ್ತು ವ್ಯವಹಾರ ಇರುವುದಿಲ್ಲ. ಪ್ರತಿವಾದಿಗಳನ್ನು ನನಗೆ ಯಾರು ಪರಿಚಯ ಮಾಡಿಕೊಟ್ಟಿರುವುದಿಲ್ಲ. ಪ್ರತಿವಾದಿ 1 ರಿಂದ 5 ಅವರು ಈಗ ಜೀವಂತ ಇದ್ದಾರೆಂದು ನಾನು ಅಂದುಕೊಂಡಿರುತ್ತೇನೆ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ.

ನಿ.ಪಿ 8 ರಲ್ಲಿ ಪ್ರತಿವಾದಿ 1 ರಿಂದ 5 ದಾವಾ ಸ್ವತ್ತಿನ ಕಾನೂನು ಬದ್ದ ಮಾಲಿಕರು ಎಂದು ಬರೆಸಿರುತ್ತೇನೆ. ನಿ.ಪಿ 1 ರಲ್ಲಿಯೂ ಸಹ ಪ್ರತಿವಾದಿ 1 ರಿಂದ 5 ಸಹ ದಾವಾ ಸ್ವತ್ತಿನ ಮಾಲಿಕರು ಎಂದು ಬರೆಯಲಾಗಿದೆ. ನಿ.ಪಿ 1 ರಲ್ಲಿ ವಿಭಾಗದಂತೆ ನಮ್ಮ ಭಾಗಕ್ಕೆ ಬಂದ ಎಂಬ ಒಕ್ಕಣೆ ಇರುವುದಿಲ್ಲ. ನಿ.ಪಿ 1 ರಲ್ಲ ಎಂ.ಆರ್ ಗಳ ಬಗ್ಗೆ ಒಕ್ಕಣೆ ಇರುತ್ತದೆ ಅದರಲ್ಲಿ ಇರುವ ಎಂ.ಆರ್ ಗಳ ಬಗ್ಗೆ ನನಗೆ ಗೊತ್ತಿದೆ. ನಿ.ಪಿ 1 ರಲ್ಲಿ 5 ಎಂ.ಆರ್ ಗಳು ಇರುತ್ತವೆ ಅವುಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ನೀಡಿರುವ ದಾಖಲೆಗಳಲ್ಲಿ ನಾನು ಹೇಳುವ ರೀತಿ ಯಾವುದೇ ಎಂ.ಆರ್ ಇರುವುದಿಲ್ಲವೆಂದರೆ ಸರಿಯಲ್ಲ.

ನಿ.ಪಿ 1 ರಲ್ಲಿ ನಮೂದು ಇರುವ 1ವರೆ ವರ್ಷಗಳ ಒಳಗೆ ನಾನು ಪ್ರತಿವಾದಿಗಳಿಗೆ ಲಿಖಿತ ರೂಪದಲ್ಲಿ ಯಾವುದೇ ನೋಟಿಸ ನೀಡಿರುವುದಿಲ್ಲವೆಂದರೆ ಸರಿಯಲ್ಲ. ದಿಃ 22.09.2017 ರಿಂದ 3 ವರ್ಷದ ಅವದಿ ಒಳಗೆ ದಾವೆ ಸಲ್ಲಿಸಿಲ್ಲವೆಂದರೆ ಸರಿಯಲ್ಲ.

ನಿ.ಪಿ 8 ರಂತೆ ನಾನು ನೀಡಿರುವ ನೋಟಿಸ್ ಗಳು ಏನು ಆಗಿರುತ್ತವೆಂದು ನನಗೆ ಗೊತ್ತಿಲ್ಲ. ಸದರಿ ನೋಟಿಸ್ ಗಳು ಜಾರಿ ಆಗಿದ್ದವಾ ಇಲ್ಲವಾ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ನೀಡಿರುತ್ತೇನೆ. ನಾನು ನೀಡಿರುವ ದಾಖಲೆಗಳಲ್ಲಿ ನಾನು ಹೇಳುವಂತಹ ನೋಟಿಸ ಜಾರಿ ಆದ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲವೆಂದರೆ ಸರಿ. ನಿ.ಪಿ 1 ರಲ್ಲಿ ಪಂಚಾಯಿತಿ ವಿಭಾಗ ಪತ್ರದಂತೆ ಎಂದು ನಮೂದು ಇದ್ದು ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪಡೆದಿದ್ದೀರಾ ಮತ್ತು ಪರಿಶೀಲನೆ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲವೆಂದು ಹೇಳುತ್ತಾರೆ.

ಸದರಿ 17 ಗುಂಟೆ ಆಸ್ತಿ ಎಲ್ಲಿ ಬರುತ್ತದೆಂದು ನನಗೆ ಗೊತ್ತು. ಸದರಿ ಜಮೀನಿನ ಚಕ್ಕುಬಂದಿ  ನನಗೆ ಗೊತ್ತಿಲ್ಲ. ಪ್ರತಿವಾದಿಗಳು ತಮ್ಮ ತಕರಾರಿನಲ್ಲಿ ಮತ್ತು ಪಾಟೀ ಸವಾಲಿನಲ್ಲಿ ಪ್ಯಾರಿಜಾನ್ ಅವರಿಗೆ ಹೆಣ್ಣು ಮಕ್ಕಳ ಬಗ್ಗೆ ಹೇಳಿದ್ದು ಅವರ ಬಗ್ಗೆ ವಿಚಾರಣೆ ಮಾಡಿದ್ದೀರಾ ಮತ್ತು ಎಲ್ಲಿದ್ದಾರೆಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಹೆಣ್ಣು ಮಕ್ಕಳು ಇರುವುದಿಲ್ಲವೆಂದು ಹೇಳುತ್ತಾರೆ.

ನಿಜವಾಗಿಯೂ ಕ್ರಯದ ಉದ್ದೇಶಕ್ಕೆ ನಿ.ಪಿ 1 ಆಗಿದ್ದಲ್ಲಿ ನಾನು ಈ ಮೇಲೆ ಹೇಳಿದ ಅಂಶಗಳನ್ನು ಪರಿಗಣಿಸುತ್ತಿದ್ದೇ ಕೇವಲ ಸಾಲದ ಭದ್ರತೆಗಾಗಿ ಆದ ದಾಖಲೆ ಆದ ಕಾರಣ ಯಾವುದನ್ನು ಪರಿಗಣಿಸಿಲ್ಲವೆಂದರೆ ಸರಿಯಲ್ಲ. ಪ್ರತಿವಾದಿ 3 ಅವರು 2015 ರಲ್ಲಿ ಹಣದ ಅವಶ್ಯಕತೆ ಇದ್ದ ಕಾರಣ ಕುಣಿಗಲ್  ನಲ್ಲಿ ಸಾಲ ನೀಡುವವರನ್ನು ಹುಡುಕುತ್ತಿದ್ದು ಆಗ ಅನಂತರಾಮು ಅವರು ನನ್ನ ಹೆಸರನ್ನು ಅವರಿಗೆ ಸೂಚಿಸಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 3 ಅವರು 5 ಲಕ್ಷ ಹಣವನ್ನು ಸಾಲವಾಗಿ ನೀಡುವಂತೆ ಕೇಳಿದ್ದು ನಾನು 18 ಪ್ರತಿಶತ ಬಡ್ಡಿಗೆ 5 ಲಕ್ಷ ಹಣ ನೀಡುವುದಾಗಿ ಒಪ್ಪಿರುತ್ತೇನೆ ಎಂದರೆ ಸರಿಯಲ್ಲ.  ಆ ಸಮಯದಲ್ಲಿ ನಾನು ನಿಮ್ಮ ಹೆಸರಿಗೆ ಇರುವ ಆಸ್ತಿಯ ದಾಖಲೆ ಬರೆದುಕೊಡಬೇಕು ಎಂದು ಪ್ರತಿವಾದಿ 3 ಅವರಿಗೆ ಹೇಳಿದಾಗ  ಅವರು ತಮ್ಮ ಹೆಸರಿನಲ್ಲಿ ಯಾವುದೇ ದಾಖಲೆ ಇರುವುದಿಲ್ಲವೆಂದು ಹೇಳಿದ್ದು ಆಗ ನಾನು ದಾಖಲೆ ಬೇಕೆಂದು ಕೇಳಿದಾಗ ಉಳಿದ

ಪ್ರತಿವಾದಿಗಳ ಜೊತೆಯಾಗಿ ಬರೆದುಕೊಡಬೇಕು ಎಂದಾಗ ಅವರು ಭದ್ರತೆಗಾಗಿ ದಾಖಲೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಸದರಿ ದಾಖಲೆಯ ನಂತರ ಪ್ರತಿವಾದಿಗಳು ಪ್ರತಿ ತಿಂಗಳ ಬಡ್ಡಿ ಹಣವನ್ನು ಫೆಬ್ರವರಿ 2020ರವರೆಗೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಕೋವಿಡ್ ಇದ್ದ ಕಾರಣ ಹಣ ಕಟ್ಟಲು ಜೂನ್ 2021ರವರೆಗೂ ಆಗಿರುವುದಿಲ್ಲ ನಂತರ ಅವರು ಪೂರ್ತಿ ಹಣವನ್ನು ನೀಡಿದ್ದು ದಾಖಲೆಯನ್ನು ಬರೆದುಕೊಡುವಂತೆ ಕೇಳಿದಾಗ ನಾನು ಅವರಿಗೆ ನಿ.ಪಿ 1 ರ ನಕಲು ಪ್ರತಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆದ ಕಾರಣ ನಾನು 2019 ರಿಂದ ಜುಲೈ 2021ರವೆಗೆ ಯಾವುದೇ ದಾವೆ ಸಲ್ಲಿಸಿಲ್ಲವೆಂದರೆ ಸರಿಯಲ್ಲ.

ಪ್ರತಿವಾದಿಗಳು ಪೂರ್ತಿ ಹಣವನ್ನು ಬಡ್ಡಿ ಸಮೇತ ನೀಡಲು ಬಂದಾಗ ನಾನು ತಿರಸ್ಕಾರ ಮಾಡಿ ನಾನು ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಪ್ರತಿವಾದಿಗಳು ನಡುವೆ ದಾವಾ ಸ್ವತ್ತನ್ನು ಮಾರಾಟ ಮಾಡುವ ಉದ್ದೇಶದಿಂದ ಯಾವುದೇ ವ್ಯವಹಾರಗಳು ಆಗಿರುವುದಿಲ್ಲ ಅವರು ದಾವಾ ಸ್ವತ್ತನ್ನು ಮಾರಾಟ ಮಾಡುವ ಪ್ರಸ್ತಾವವನ್ನು ಇಟ್ಟಿಲ್ಲವೆಂದರೆ ಸರಿಯಲ್ಲ. ನಿ.ಪಿ 1 ಹಣದ ಭದ್ರತೆಗಾಗಿ ಆದ ದಾಖಲೆ ಆದ ಕಾರಣ ದಾವಾ ಸ್ವತ್ತಿನ ಸ್ವರೂಪವನ್ನು ಪರಿಶೀಲನೆ ಮಾಡಿಲ್ಲ ಮತ್ತು ದಾವಾ ಸ್ವತ್ತನ್ನು ನೋಡಿಲ್ಲವೆಂದರೆ ಸರಿಯಲ್ಲ.

ಒಂದುವೇಳೆ ಕ್ರಯದ ಉದ್ದೇಶದಿಂದ ದಾಖಲೆ ಆಗಿದ್ದಲ್ಲಿ ನಾನು ನಿಗದಿತ ಅವಧಿಯಲ್ಲಿ ಪ್ರತಿವಾದಿಗಳಿಗೆ ನೋಟಿಸ ನೀಡುತ್ತಿದ್ದೇ ಹಣದ ಭದ್ರತೆಗಾಗಿ ಆದ ದಾಖಲೆ ಆದ ಕಾರಣ ಪ್ರತಿವಾದಿಗೆ ನೋಟಿಸ್‌ನೀಡಿಲ್ಲವೆಂದರೆ ಸರಿಯಲ್ಲ. ಹಣದ ಭದ್ರತೆಗಾಗಿ ಬರೆದು ಕೊಟ್ಟ ದಾಖಲೆ ಆದ ಕಾರಣ ಪ್ರತಿವಾದಿಗಳು ತಕರಾರನ್ನು ಸಲ್ಲಿಸಿದ ನಂತರ ನಾನು ಕ್ರಯ ಪತ್ರವನ್ನು ಬರೆಸಿಕೊಳ್ಳಲು ಮತ್ತು ಹಣ ನೀಡಲು ತಯಾರಿರುತ್ತೇನೆಂದು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಪ್ರತಿವಾದಿಗಳ ಅವಿದ್ಯಾವಂತಿಕೆಯನ್ನು ದುರುಪಯೋಗ ಪಡಿಸಿಕೊಂಡು ಹಣದ ಭದ್ರತೆಗಾಗಿ ಆದ ದಾಖಲೆಯನ್ನು ಕ್ರಯದ ಕರಾರು ಪತ್ರವೆಂದು ಹೇಳಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ

ಕುಣಿಗಲ್.